ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 561/2023

(ಪ್ರಾಸಾ-5 ಚಾಸಾ-5 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 20.08.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಉಷಾ |
| ಗಂಡನ ಹೆಸರು | - | ಕೇಶವಮೂರ್ತಿ |
| ವಯಸ್ಸು | - | 31 ವರ್ಷ, |
| ಉದ್ಯೋಗ | - | ಟೈಲರ್ ಕೆಲಸ |
| ವಾಸ | - | ತಿಗರಳಪಾಳ್ಯ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಮೃತ ಕೇಶವಮೂರ್ತಿ ನನ್ನ ಗಂಡ. ನನ್ನ ಗಂಡ ಮೃತ ಕೇಶವಮೂರ್ತಿ ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಗೆ ಸೇರಿದವರು. ಚಾಸಾ-36 ನನ್ನ ಗಂಡನ ಅತ್ತೆಯ ಮಗಳು. ವಿಸಿ ಮೂಲಕ ಹಾಜರುಪಡಿಸಿದ ಆರೋಪಿ ಗೊತ್ತು. ಆರೋಪಿ ಚಾಸಾ-36 ರವರ ಗಂಡ. ಆರೋಪಿ ತಿಗಳರ ಜಾತಿಗೆ ಸೇರಿದವರು.

2. ಡಿಸೆಂಬರ್ 2022 ರಲ್ಲಿ ಚಾಸಾ-36 ಮತ್ತು ಆರೋಪಿ ಗಲಾಟೆ ಮಾಡಿಕೊಂಡು ಆರೋಪಿ ಮನೆ ಬಿಟ್ಟು ಹೋಗಿರುವುದಾಗಿ ಚಾಸಾ-36 ರವರು ನನ್ನ ಗಂಡ ಕೇಶವಮೂರ್ತಿಗೆ ತಿಳಿಸಿದ್ದರು.

3. ಈ ಬಗ್ಗೆ ದಿಃ13.01.2023 ರಂದು ನನ್ನ ಗಂಡ ಮೃತನು ಪೀಣ್ಯ 2 ನೇ ಹಂತದ ಮಂದಾರ್ ಬಾರ್ ನಲ್ಲಿ ರಾತ್ರಿ ಸುಮಾರು 8 ಘಂಟೆಗೆ ಭೇಟಿಯಾಗಿ ಆರೋಪಿಗೆ ಬುದ್ದಿವಾದ ಹೇಳಿ ಆರೋಪಿಗೆ ಒಂದೆರಡು ಏಟು ಹೊಡೆದಿದ್ದರು. ಆಗ ನನ್ನ ತಮ್ಮ ಚಾಸಾ-1 ಸಹ ಅಲ್ಲಿ ಇದ್ದರು.

4. ಸಮಾಧಾನವಾದ ನಂತರ ಚಾಸಾ-1 ಮತ್ತು ನನ್ನ ಗಂಡ ಸೇರಿ ಆರೋಪಿಯನ್ನು ಆತನ ಅತ್ತೆಯ ಮನೆಗೆ ಮನೆಗೆ ಒಂದೇ ಬೈಕಿನಲ್ಲಿ ಹೋಗುತ್ತಿದ್ದಾಗ ಸೋಲದೇವನಹಳ್ಳಿಯ ಚಿಗರಿ ವೈನ್ಸ್ ಶಾಪ್ ಬಳಿ ರಾತ್ರಿ ಸುಮಾರು 10.55 ರ ಸಮಯದಲ್ಲಿ ಆರೋಪಿತನು ಚಾಸಾ-1 ಮತ್ತು ನನ್ನ ಗಂಡನಿಗೆ ಚಾಕುವಿನಿಂದ ತಿವಿದಿರುತ್ತಾನೆ. ನನಗೆ ಹೊಡೆಯುತ್ತೀರಾ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಆರೋಪಿಯು ಅವರಿಬ್ಬರಿಗೆ ಚಾಕುವಿನಿಂದ ತಿವಿದಿರುತ್ತಾನೆ.

5. ಆರೋಪಿ ನನ್ನ ಗಂಡನ ಎದೆಗೆ, ಹೊಟ್ಟೆಗೆ ಮತ್ತು ಭುಜಕ್ಕೆ ಚಾಕುವಿನಿಂದ ಹಲ್ಲೆ ಮಾಡಿದ್ದಾನೆ. ಆರೋಪಿ ಚಾಸಾ-1 ರವರಿಗೆ ಎದೆಯಿಂದ ಸ್ವಲ್ಪ ಕೆಳಗಿನ ಭಾಗಕ್ಕೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ. ಹತ್ತಿರದಲ್ಲಿದ್ದ ಪೋಲಿಸ್ ಠಾಣೆಗೆ ಯಾರೋ ವಿಷಯ ತಿಳಿಸಿದ್ದರ ಮೇರೆಗೆ ಪೋಲಿಸರು ಬಂದು ನನ್ನ ಗಂಡ ಮತ್ತು ನನ್ನ ತಮ್ಮನನ್ನು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ. ನನ್ನ ತಮ್ಮನ ಮೊಬೈಲ್ ಗೆ ನಾನು ಫೋನ್ ಮಾಡಿದಾಗ ಪೋಲಿಸರು ಕರೆ ಸ್ವೀಕರಿಸಿ ಚಾಸಾ-1 ಮತ್ತು ನನ್ನ ಗಂಡ ಆಸ್ಪತ್ರೆಯಲ್ಲಿರುವ ವಿಚಾರ ತಿಳಿಸಿದರು.

6. ನಂತರ ನಾನು ರಾತ್ರಿ 11.30 ಘಂಟೆ ಸುಮಾರಿಗೆ ಸಪ್ತಗಿರಿ ಆಸ್ಪತ್ರೆಗೆ ಹೋದಾಗ ನನ್ನ ತಮ್ಮನಿಗೆ ಪ್ರಜ್ಞೆ ಇದ್ದು ಆತ ಘಟನೆಯ ಎಲ್ಲಾ ವಿಚಾರವನ್ನು ನನಗೆ ತಿಳಿಸಿದನು. ಆಗ ನನ್ನ ಗಂಡನಿಗೆ ಪ್ರಜ್ಞೆ ಇರಲಿಲ್ಲ. ಚಿಕಿತ್ಸೆ ಫಲಕಾರಿಯಾಗದೇ ನನ್ನ ಗಂಡ ದಿಃ14.01.2023 ರಂದು ಶನಿವಾರ ಮಧ್ಯಾಹ್ನ 01.30 ರ ಸಮಯದಲ್ಲಿ ಮೃತರಾದರು. ಘಟನೆಯ ಬಗ್ಗೆ ಚಾಸಾ-1 ರವರು ಆಸ್ಪತ್ರೆಯಲ್ಲಿ ಇರುವಾಗ ದಿಃ13.01.2023 ರಂದು ದೂರು ನೀಡಿದ್ದು ನಾನು ನನ್ನ ಗಂಡ ಮೃತನಾದ ನಂತರ ದಿಃ14.01.2023 ರಂದು ದೂರು ನೀಡಿರುತ್ತೇನೆ. ಸಾಕ್ಷಿ ದೂರು ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-12 ಎಂದು ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆಎಂಸಿ ವಕೀಲರಿಂದಃ**

7. ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಮೃತ ನನ್ನ ಗಂಡ 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದರು. ನನ್ನ ತಂದೆ ತಾಯಿಗೆ ನಾನು ಮತ್ತು ನನ್ನ ತಮ್ಮ ಚಾಸಾ-1 ಮಕ್ಕಳು. ನನ್ನ ತಂದೆ ತಾಯಿ ಜೀವಂತ ಇದ್ದಾರೆ. ನನ್ನ ಮತ್ತು ಮೃತನದ್ದು ಅಂತರ್ಜಾತಿ ಪ್ರೇಮ ವಿವಾಹ. ಮದುವೆಗಿಂತ ಮುಂಚೆ 5 ವರ್ಷಗಳ ಕಾಲ ನಾವಿಬ್ಬರು ಪರಿಚಯವಾಗಿ ಪ್ರೀತಿಸುತ್ತಿದ್ದೆವು. ನಾವು ಪ್ರೇಮಿಸಿ 2014 ರಲ್ಲಿ ಮದುವೆಯಾಗಿದ್ದು ನನ್ನ ತಂದೆ ತಾಯಿ ಹಾಗೂ ನನ್ನ ತಮ್ಮನಿಗೆ ಇಷ್ಟ ಇರಲಿಲ್ಲ. ನನ್ನ ತಂದೆ ತಾಯಿ ಇಚ್ಚೆಗೆ ವಿರುದ್ಧವಾಗಿ ನಾವಿಬ್ಬರು ಮದುವೆಯಾಗಿದ್ದೇವೆ.

8. ಮದುವೆಯಾಗಿ ನಾಲ್ಕು ವರ್ಷಗಳ ಕಾಲ ನನ್ನ ತಂದೆ ತಾಯಿ ನನ್ನನ್ನು ಮನೆಗೆ ಸೇರಿಸಿಕೊಳ್ಳಲಿಲ್ಲ. ನಾವು ಮದುವೆಯ ನಂತರ ನನ್ನ ಅತ್ತೆಯ ಮನೆಯಲ್ಲಿ ವಾಸಿಸುತ್ತಿದ್ದೆವು. ನಾನು ಮದುವೆಗಿಂತ ಮುಂಚಿನಿಂದಲೂ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದೇನೆ. ಮದುವೆಯ ನಂತರ ನಿಮ್ಮ ಗಂಡನಿಗೆ ಕುಡಿತದ ಅಭ್ಯಾಸ ಜಾಸ್ತಿಯಾಗಿತ್ತು ಎಂದರೆ ಸಾಕ್ಷಿ ಮದುವೆಗಿಂತ ಮುಂಚೆಯಿಂದಲೂ ಅವರಿಗೆ ಕುಡಿತನ ಅಭ್ಯಾಸವಿತ್ತು. ಮೃತ ಹಾಗೂ ನನಗೆ ಇಬ್ಬರು ಹೆಣ್ಣು ಮಕ್ಕಳು.

9. ಮದುವೆಯ ನಂತರ ನನ್ನ ಗಂಡ ಕುಡಿದುಕೊಂಡು ಬಂದು ನನಗೆ ಹಾಗೂ ನನ್ನ ಮಕ್ಕಳಿಗೆ ಹೊಡಿ ಬಡಿ ಮಾಡುತ್ತಿದ್ದುದ್ದರಿಂದ ನನ್ನ ತಂದೆ ತಾಯಿ ಹಾಗೂ ನನ್ನ ತಮ್ಮ ಚಾಸಾ-1 ರವರು ನೋವುಂಟು ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನು ನನ್ನ ಸಂಬಳದ ಹಣವನ್ನು ಸಹ ಕಿತ್ತುಕೊಳ್ಳುತ್ತಿದ್ದರಿಂದ ಚಾಸಾ-1 ಇವರು, ಮೃತನನ್ನು ಬಿಟ್ಟು ತವರು ಮನೆಗೆ ಬರುವಂತೆ ಸಾಕಷ್ಟು ಬಾರಿ ಹೇಳಿದ್ದರು ಎಂದರೆ ಸರಿಯಲ್ಲ.

10. ಚಾಸಾ-36 ಈಕೆ ನನ್ನ ಗಂಡನ ಸೋದರ ಮಾವನ ಮಗಳು. ಆರೋಪಿ ಮತ್ತು ಚಾಸಾ-36 ಪ್ರೇಮವಿವಾಹವಾಗಿದ್ದರು. ಘಟನೆಗಿಂತ ಮೂರು ವರ್ಷಗಳ ಮೊದಲೇ

ಆರೋಪಿ ಮತ್ತು ಚಾಸಾ-36 ಇವರು ಜಗಳ ಮಾಡಿಕೊಂಡು ದೂರವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

11. ಚಾಸಾ-36 ಹಾಗೂ ನನ್ನ ಗಂಡನ ನಡುವೆ ಒಳ್ಳೇ ಸ್ನೇಹವಿತ್ತು ಹಾಗೂ ಚಾಸಾ-36 ರವರು ಏನಾದರೂ ಇದ್ದರೆ ತಮ್ಮ ಸಮಸ್ಯೆಗಳನ್ನು ನನ್ನ ಗಂಡನ ಬಳಿ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಮೃತ ಹಾಗೂ ಚಾಸಾ-36 ಇವರ ನಡುವೆ ಸ್ನೇಹ ಇದ್ದುದ್ದರಿಂದ ತಾವು ಏಕೆ ಅವಳಿಗೆ ಪ್ರಾಶಸ್ತ್ಯ ಕೊಡುತ್ತೀರಿ ಎಂದು ನಾನು ನನ್ನ ಗಂಡನ ಜೊತೆಗೆ ಪದೇ ಪದೇ ಜಗಳ ಮಾಡುತ್ತಿದ್ದು ಆಗ ನನ್ನ ಗಂಡ ನನಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನು ಚಾಸಾ-36 ಇವರೊಂದಿಗೆ ಸ್ನೇಹ ಸಂಭಾಷಣೆಯಿಂದ ಹಾಗೂ ಅವರಿಬ್ಬರೂ ಮನೆಗಳಿಗೆ ಭೇಟಿ ಮಾಡುತ್ತಿದ್ದುದ್ದರಿಂದ ನನಗೆ ನೋವಾಗಿ ನನ್ನ ತಂದೆ ತಾಯಿ ಹಾಗೂ ತಮ್ಮನಿಗೆ ಈ ವಿಷಯವನ್ನು ಹೇಳಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ-1 ಇವರು ನನ್ನ ಗಂಡನಿಗೆ ಸಾಕಷ್ಟು ಬಾರಿ ಬುದ್ದಿವಾದ ಹೇಳಿದ್ದರು ಎಂದರೆ ಸರಿಯಲ್ಲ.

12. ಘಟನೆಯ ಬಗ್ಗೆ ನನ್ನ ತಮ್ಮ ಚಾಸಾ-1 ನನಗೆ ಹೇಳಿದ್ದರಿಂದ ನನಗೆ ತಿಳಿದುಬಂತು ಎಂದರೆ ಸಾಕ್ಷಿ ಮಂದಾರ ಬಾರ್ ಬಳಿ ನಡೆದ ಘಟನೆಯ ಬಗ್ಗೆ ನನ್ನ ಗಂಡ ನನಗೆ ಆದಾಗಲೇ ತಿಳಿಸಿದ್ದರು, ಚಿಗರಿ ವೈನ್ಸ್ ಶಾಪ್ ಬಳಿ ನಡೆದ ಘಟನೆಯ ಬಗ್ಗೆ ಮಾತ್ರ ನನ್ನ ತಮ್ಮ ಚಾಸಾ-1 ನನಗೆ ಆಸ್ಪತ್ರೆಯಲ್ಲಿ ತಿಳಿಸಿದರು ಎಂದು ಹೇಳುತ್ತಾರೆ.

13. ನನ್ನ ಗಂಡ ಮನೆಯಿಂದ ಆ ದಿನ ಸಂಜೆ 6 ಘಂಟೆಗೆ ಮನೆಯಿಂದ ಹೊರಟು ಹೋಗಿದ್ದು ನಾನು 8 ಘಂಟೆಗೆ ಬಂದು ಅವರಿಗೆ ಫೋನ್ ಮಾಡಿ ಕೇಳಿದ್ದೆ. ರಾತ್ರಿ 09.30-09.45 ರವರೆಗೆ ನನ್ನ ಗಂಡ ನನ್ನ ಜೊತೆ ಫೋನಿನಲ್ಲಿ ಮಾತನಾಡಿದ್ದರು. ಆ ದಿನ ನನ್ನ ಗಂಡ ರಾತ್ರಿಯವರೆಗೆ ಫೋನಿನಲ್ಲಿ ಮಾತನಾಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಚಾಸಾ-1 ರಾತ್ರಿ 8 ಘಂಟೆಗೆ ಮಂದಾರ ಬಾರ್ ಬಳಿ ಹೋಗಿದ್ದನು.

14. ದೂರನ್ನು ನಾನೇ ಸ್ವತಃ ಬರೆದು ಸಹಿ ಮಾಡಿರುತ್ತೇನೆ. ದೂರಿನಲ್ಲಿರುವ ಹಸ್ತಾಕ್ಷರ ಹಾಗೂ ನನ್ನ ಸಹಿಯಲ್ಲಿರುವ ಹಸ್ತಾಕ್ಷರ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಾನು ಸದರಿ ದೂರನ್ನು ಖುದ್ದಾಗಿ ಬರೆದಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ನನ್ನ ತಮ್ಮ ಹೇಳಿದ್ದನ್ನು ಕೇಳಿಕೊಂಡು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

15. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿಃ13.01.2023 ರಂದು ನನ್ನ ಗಂಡ ಆರೋಪಿಯನ್ನು ಭೇಟಿ ಮಾಡಿರಲಿಲ್ಲ ಹಾಗೂ ಆರೋಪಿ ಮಂದಾರ ಬಾರ್ ಹಾಗೂ ಚಿಗರಿ ವೈನ್ಸ್ ಶಾಪ್ ಬಳಿ ಹೋಗಿಲ್ಲ ಹಾಗೂ ನನ್ನ ತಮ್ಮ ಹಾಗೂ ನನ್ನ ಗಂಡನ ಮೇಲೆ ಆರೋಪಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಚಾಸಾ-1 ಇಬ್ಬರೇ ಎರಡು ಬಾರ್ ಗಳಲ್ಲಿ ಚೆನ್ನಾಗಿ ಕುಡಿದು ಇಬ್ಬರೇ ಬೈಕಿನಲ್ಲಿ ಹೋಗುತ್ತಿರುವಾಗ ನನಗೆ ನನ್ನ ಗಂಡ ತೊಂದರೆ ಕೊಡುತ್ತಿದ್ದುದರಿಂದ ಆ ಕೋಪದಿಂದಲೂ ಸಹ ಇಬ್ಬರು ಕಿತ್ತಾಡಿಕೊಂಡಿದ್ದು ಚಾಸಾ-1 ಮತ್ತು ಮೃತನು ಒಬ್ಬರಿಗೊಬ್ಬರು ಹಲ್ಲೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಗಲಾಟೆ ಮಾಡಿಕೊಂಡು ಮನೆ ಬಿಟ್ಟು ಹೋದ ವಿಚಾರವನ್ನು ಚಾಸಾ-36 ರವರು ನನ್ನ ಗಂಡನಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-36 ರವರೊಂದಿಗೆ ಷಾಮೀಲಾಗಿ ನನ್ನ ತಮ್ಮನಾದ ಚಾಸಾ-1 ಇವರನ್ನು ಉಳಿಸಿಕೊಳ್ಳಲು ಆರೋಪಿಯ ಮೇಲೆ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು